# ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ

**"ಅಭಿವೃದ್ಧಿ ಭವನ"** ಐವಾನ-ಎ-ಶಾಹಿ, ಕಲಬುರಗಿ-585102

ದೂರವಾಣಿ: (08472) - 256767,239556,255564, ಫ್ಯಾಕ್ಸ್ : (08472) 227527

Email: hkadbgulb@gmail.com Website: hkrdb.kar.nic.in


ಸಂಖ್ಯೆ:ಕಕಪ್ರಅಮಂ/ಯೋಶಾ/ಸನಿ/ಕ್ರಿಯೋ/01/2023-24/3493 ದಿನಾಂಕ:21.09.2023.

**ಸುತ್ತೋಲೆ**

ವಿಷಯ: ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ 'ಅಕ್ಷರ ಆವಿಷ್ಕಾರ' ಸಮಗ್ರ ಶಾಲಾ ಅಭಿವೃದ್ಧಿ ಕಾರ್ಯಕ್ರಮ – ಅನುಷ್ಠಾನದ ಮಾರ್ಗಸೂಚಿ.

ಉಲ್ಲೇಖ: 1 ಮಾನ್ಯ ಅಧ್ಯಕ್ಷರು, ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ, ಕಲಬುರಗಿ ಇವರ ಅಧ್ಯಕ್ಷತೆಯಲ್ಲಿ ದಿನಾಂಕ 29.08.2023 ರಂದು ನಡೆದ ಸಭೆಯಲ್ಲಿ ನಿರ್ಣಯಿಸಿದಂತೆ.

2 ಕಚೇರಿಯ ಆದೇಶ ಪತ್ರ ಸಂಖ್ಯೆ ಕಕಪ್ರಅಮಂ ಯೋಶಾ ಕ್ರಿಯೋ ಕಲಬುರಗಿ ಮೈಕ್ರೋ/03/2023-24 ದಿನಾಂಕ 31.08.2023.

******

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಶೈಕ್ಷಣಿಕವಾಗಿ ಅತ್ಯಂತ ಹಿಂದುಳಿದ ಪ್ರದೇಶವಾದ ಕಲ್ಯಾಣ ಕರ್ನಾಟಕ ಭಾಗದಲ್ಲಿ ಸಮಗ್ರ ಶಾಲಾ ಅಭಿವೃದ್ಧಿಪಡಿಸುವ ಹಿನ್ನೆಲೆಯಲ್ಲಿ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯು 2023-24ರ ವರ್ಷವನ್ನು 'ಶೈಕ್ಷಣಿಕ ವರ್ಷ' ವೆಂದು ಘೋಷಿಸಿದೆ. ಮಂಡಳಿಗೆ ವಾರ್ಷಿಕವಾಗಿ ಬಿಡುಗಡೆಯಾಗುವ ಅನುದಾನದಲ್ಲಿ (ಮೈಕ್ರೊ ಮತ್ತು ಮ್ಯಾಕ್ರೊ) ಪ್ರತಿಶತ 25% ರಷ್ಟು ಅನುದಾನವನ್ನು ಶಿಕ್ಷಣ ವಲಯದ ಸಮಗ್ರ ಅಭಿವೃದ್ಧಿಗಾಗಿ (ಮೂಲಭೂತ ಸೌಕರ್ಯ ಹಾಗೂ ಶೈಕ್ಷಣಿಕ ಗುಣಮಟ್ಟವನ್ನು ಹೆಚ್ಚಿಸಲು) 'ಅಕ್ಷರ ಆವಿಷ್ಕಾರ' ಕಾರ್ಯಕ್ರಮವನ್ನು ರೂಪಿಸಿದೆ. ಪ್ರಸ್ತುತ 2023-24ನೇ ಸಾಲಿನಲ್ಲಿ ಕಲಬುರಗಿ ವಿಭಾಗಕ್ಕೆ ಮೈಕ್ರೊ ಯೋಜನೆಯಡಿ ರೂ. 45675.00 ಹಾಗೂ ಮ್ಯಾಕ್ರೊ ಯೋಜನೆಯಡಿ ರೂ. 19575.00 ಅನುದಾನವನ್ನು ನಿಗದಿಪಡಿಸಿದೆ. ಅನುದಾನದ ವಿವರ ಕೆಳಗಿನಂತಿದೆ.

| ಕ್ರ. ಸಂ. | ಜಿಲ್ಲೆ | ಮೈಕ್ರೋ ಯೋಜನೆಯಡಿ ಬಿಡುಗಡೆಯಾದ ಅನುದಾನ | ಮ್ಯಾಕ್ರೋ ಯೋಜನೆಯಡಿ ಬಿಡುಗಡೆಯಾದ ಅನುದಾನ | ಒಟ್ಟು (ರೂ. ಲಕ್ಷಗಳಲ್ಲಿ) |
|---|---|---|---|---|
| 1 | ಬೀದರ | 6780.29 | 2905.84 | 9686.13 |
| 2 | ಕಲಬುರಗಿ | 12719.62 | 5451.27 | 18170.89 |
| 3 | ಯಾದಗೀರ | 5308.60 | 2275.12 | 7583.72 |
| 4 | ರಾಯಚೂರು | 8146.86 | 3491.51 | 11638.37 |
| 5 | ಕೊಪ್ಪಳ | 5203.48 | 2230.06 | 7433.54 |
| 6 | ಬಳ್ಳಾರಿ | 2575.46 | 1103.77 | 3679.23 |
| 7 | ವಿಜಯನಗರ | 4940.68 | 2117.43 | 7058.11 |
| | ಒಟ್ಟು | **45675.00** | **19575.00** | **65249.99** |

ಕಲಬುರಗಿ ವಿಭಾಗದಲ್ಲಿ ಒಟ್ಟು 8976 (ಆರ್.ಎಂ.ಎಸ್.ಎ ಶಾಲೆಗಳು ಒಳಗೊಂಡು 9249 ಶಾಲೆಗಳಿದ್ದು), 5 ವರ್ಷಗಳ ಅವಧಿಯಲ್ಲಿ ಹಂತ ಹಂತವಾಗಿ ಪ್ರತಿ ವರ್ಷಕ್ಕೆ 2000 ಶಾಲೆಗಳಂತೆ

ಎಲ್ಲಾ 9249 ಶಾಲೆಗಳಲ್ಲಿಯೂ ಸಹ ಮೂಲಭೂತ ಸೌಲಭ್ಯಗಳನ್ನು 'ಅಕ್ಷರ ಆವಿಷ್ಕಾರ' ಯೋಜನೆಯಡಿ ಒದಗಿಸಲಾಗುತ್ತದೆ.

2023-24ನೇ ಸಾಲಿನಲ್ಲಿ ಸರಕಾರ ಅತಿಥಿ ಶಿಕ್ಷಕರನ್ನು ಒದಗಿಸಿದ ನಂತರವೂ ಖಾಲಿ ಉಳಿದಿರುವ ಶಿಕ್ಷಕರ ಹುದ್ದೆಗಳನ್ನು ಕಲ್ಯಾಣ-ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯಿಂದ 'ಅಕ್ಷರ ಆವಿಷ್ಕಾರ' ಯೋಜನೆಯಡಿ 'ಅಕ್ಷರ ಮಿತ್ರ' ಎಂಬ ಹೆಸರಿನಲ್ಲಿ 2618 ಅತಿಥಿ ಶಿಕ್ಷಕರನ್ನು ಒದಗಿಸಲಾಗುತ್ತಿದೆ. ಅತಿಥಿ ಶಿಕ್ಷಕರಿಗಾಗಿ ನಿಗದಿಪಡಿಸಿದ ಗೌರವ ಸಂಭಾವನೆ ಕ್ರಮವಾಗಿ ಪ್ರತಿ ತಿಂಗಳು ರೂ. 10000/- ಮತ್ತು ರೂ. 10500/- ಗಳನ್ನು ಪ್ರಾಥಮಿಕ ಹಾಗೂ ಪ್ರೌಢ ಶಾಲಾ 'ಅಕ್ಷರ ಮಿತ್ರ' ಶಿಕ್ಷಕರಿಗೂ (7 ತಿಂಗಳ ಅವಧಿಗಾಗಿ) ನಿಗದಿಪಡಿಸಿದೆ. ಸದರಿ ಅನುದಾನವನ್ನು ಮಂಡಳಿಯ ಬಡ್ಡಿ ಹಣ ಹಾಗೂ ಪ್ರಾದೇಶಿಕ ನಿಧಿಯಿಂದ (Regional Fund) ನೀಡಲಾಗುತ್ತಿದೆ.

## -:ಮಾರ್ಗಸೂಚಿಗೆ ಪರಿಗಣಿಸಿದ ಅಂಶಗಳು:-

### A) ಮೂಲಭೂತ ಶೈಕ್ಷಣಿಕ ಅಂಶಗಳು:

1. ವಿಧಾನ ಸಭಾ ಕ್ಷೇತ್ರದಲ್ಲಿನ ಸರಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳ ಸಂಖ್ಯೆ.
2. ವಿಧಾನ ಸಭಾ ಕ್ಷೇತ್ರದಲ್ಲಿನ ಸರಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ಅಭ್ಯಾಸ ಮಾಡುತ್ತಿರುವ ಮಕ್ಕಳ ಸಂಖ್ಯೆ.
3. ವಿಧಾನ ಸಭಾ ಕ್ಷೇತ್ರದಲ್ಲಿನ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಿಗೆ ಮಂಜೂರಾದ ಶಿಕ್ಷಕರ ಸಂಖ್ಯೆ, ಕರ್ತವ್ಯ ನಿರ್ವಹಿಸುತ್ತಿರುವ ಶಿಕ್ಷಕರ ಸಂಖ್ಯೆ ಹಾಗೂ ಖಾಲಿ ಹುದ್ದೆಗಳ ಸಂಖ್ಯೆ.
4. ಸರಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ಖಾಲಿ ಇರುವ ಹುದ್ದೆಗಳಿಗೆದುರಾಗಿ ಸರಕಾರ ಮಂಜೂರು ಮಾಡಿದ ಅತಿಥಿ ಶಿಕ್ಷಕರ ಸಂಖ್ಯೆ.

### B) ಕ್ರಿಯಾಯೋಜನೆಯಲ್ಲಿನ ವಲಯಗಳು:

#### (ಅ) ಮೂಲಭೂತ ಭೌತಿಕ ಸೌಲಭ್ಯಗಳು (Physical Component):

1. ವಿಧಾನ ಸಭಾ ಕ್ಷೇತ್ರದಲ್ಲಿನ ಎಲ್ಲಾ ಸರಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳ ಮೂಲಭೂತ ಭೌತಿಕ ಅಂಶಗಳನ್ನು ಮೂರು ವಿಭಾಗಗಳಾಗಿ ವಿಂಗಡಿಸಿ,

   (a) ಕನಿಷ್ಠ (ಅತಿ ಅವಶ್ಯಕ) ಭೌತಿಕ ಸೌಲಭ್ಯಗಳು (b) ಅವಶ್ಯಕ ಭೌತಿಕ ಸೌಲಭ್ಯಗಳು, ಹಾಗೂ (c) ಹೆಚ್ಚುವರಿ ಭೌತಿಕ ಸೌಲಭ್ಯಗಳನ್ನು ಗುರುತಿಸುವುದು.
2. ಇದರಲ್ಲಿ, ಮೊದಲಿಗೆ ಕನಿಷ್ಠ ಹಾಗೂ ಅವಶ್ಯಕ ಮೂಲಭೂತ ಸೌಲಭ್ಯಗಳನ್ನು ಒದಗಿಸಲು ಆದ್ಯತೆಯನ್ನು ನೀಡುವುದು.
3. **'ಅತಿ ಅವಶ್ಯಕ ಮೂಲಭೂತ ಸೌಲಭ್ಯ'**ಗಳಲ್ಲಿ ಮುಂದಿನ ಅಂಶಗಳನ್ನು ಪರಿಗಣಿಸಿದೆ:

   (1) ಶಾಲಾ ಕೊಠಡಿಗಳ ಉನ್ನತೀಕರಣ- ಸಮಗ್ರ ಶಿಕ್ಷಣ ಕರ್ನಾಟಕದ ಮಾನದಂಡಗಳಂತೆ ಕೊಠಡಿಗಳನ್ನು ಉನ್ನತೀಕರಿಸುವುದು. ಅಂದರೆ, ಕೊಠಡಿಯ ಮೇಲ್ಚಾವಣಿ ದುರಸ್ಥಿ, Tubelights/Bulbs ಹಾಗೂ Fans ಗಳ ಅಳವಡಿಕೆ, ನೆಲಹಾಸು(Floor) ದುರಸ್ಥಿ, ಗೋಡೆಗಳ ದುರಸ್ಥಿ ಹಾಗೂ ಬಣ್ಣ ಬಳೆಯುವುದು(ಅವಶ್ಯಕವಿದ್ದಲ್ಲಿ) ಇತ್ಯಾದಿ.

(2) ನೂತನ ಕೊಠಡಿಯ ಅವಶ್ಯಕತೆಯನ್ನು ಆಯಾ ಜಿಲ್ಲಾ ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳು ಮಂಜೂರು ಮಾಡಿದ ನಂತರವೇ ಕಾಮಗಾರಿಯನ್ನು ಕೈಗೆತ್ತಿಕೊಳ್ಳುವುದು.

**ಈ ಸುತ್ತೋಲೆಯೊಂದಿಗೆ ಲಗತ್ತಿಸಿರುವ ನಮೂನೆ-1 ರಲ್ಲಿ ಜಿಲ್ಲಾ ಪಂಚಾಯತಿಯ ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳ ದೃಢಿಕರಣದೊಂದಿಗೆ ಹೊಸ ಕೊಠಡಿ ನಿರ್ಮಾಣಕ್ಕೆ ಪ್ರಸ್ತಾವನೆ ಸಲ್ಲಿಸುವುದು.**

(3) ಗಂಡು ಮತ್ತು ಹೆಣ್ಣು ಮಕ್ಕಳ ಶೌಚಾಲಯಗಳು- ಲಭ್ಯವಿರುವ ಶೌಚಾಲಯಗಳನ್ನು ಕಾರ್ಯಗತಗೊಳಿಸುವುದು ಮೊದಲ ಆದ್ಯತೆ ಆಗಿರಬೇಕು. ಗ್ರಾಮೀಣ ಭಾಗಗಳಲ್ಲಿ ಹೊಸ ಶೌಚಾಲಯಗಳ ಕಾಮಗಾರಿಯನ್ನು ಮಹಾತ್ಮಗಾಂಧಿ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ (MGNREGS) ಅಡಿಯಲ್ಲಿ ತೆಗೆದುಕೊಳ್ಳುವುದು. ನಗರ ಪ್ರದೇಶಗಳಲ್ಲಿ ಕ.ಕ.ಪ್ರ.ಅ.ಮಂಡಳಿಯ ಅಕ್ಷರ ಆವಿಷ್ಕಾರ ಯೋಜನೆಯ ಅನುದಾನವನ್ನು ಸದರಿ ಕಾಮಗಾರಿಗಳಿಗೆ ಬಳಸಿಕೊಳ್ಳಲು ಅವಕಾಶವಿದೆ.

**ಸದರಿ ನೂತನ ಶೌಚಾಲಯ ಕಾಮಗಾರಿಗಳ ಅಂದಾಜು ಪಟ್ಟಿಯಲ್ಲಿ ಕನಿಷ್ಠ 03 ವರ್ಷಗಳಿಗೆ ನಿರ್ವಹಣಾ ವೆಚ್ಚದ (Operation & Maintanence/ O&M) ನಿಭಂದನೆಯನ್ನು ಮಾಡಿಕೊಳ್ಳತಕ್ಕದ್ದು.**

ಹಾಗೂ ಬಿಲ್ಲು ಪಾವತಿ ಸಮಯದಲ್ಲಿ ನಿರ್ವಹಣಾ ನಿಭಂದನೆಯನ್ನು ಪೂರ್ಣಗೊಳಿಸಿದ ಬಗ್ಗೆ ಆಯಾ **ಶಾಲಾ ಮುಖ್ಯೋಪಾಧ್ಯಾಯರಿಂದ** ದೃಢೀಕರಣ ಪಡೆಯುವುದು.

(4) ಕುಡಿಯುವ ನೀರಿನ ವ್ಯವಸ್ಥೆ- ಸಮಗ್ರ ಶಿಕ್ಷಣ ಕರ್ನಾಟಕ ರವರ ಮಾನದಂಡಗಳ ಅನ್ವಯ ಅವಶ್ಯಕತೆಯ ಮೇರೆಗೆ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಿಕೊಳ್ಳುವುದು, ಮತ್ತು

(5) ಅಡುಗೆ ಕೋಣೆಯ ಸುಧಾರಣೆ- ಶಾಲೆಯಲ್ಲಿ ಮಕ್ಕಳ ಸಂಖ್ಯೆಯ ಅನುಗುಣವಾಗಿ ಅಡುಗೆ ಕೋಣೆಯ ಸುಧಾರಣೆ ಮಾಡುವ ಅವಕಾಶವಿರುತ್ತದೆ. ಸಾಕಷ್ಟು ಗಾಳಿ-ಬೆಳಕಿನ ವ್ಯವಸ್ಥೆ, ಪಾತ್ರೆ ತೊಳೆಯುವ ಪ್ರತ್ಯೇಕ ವ್ಯವಸ್ಥೆ(Kitchen Sink), ಕಿರು ಸಂಗ್ರಹಣಾ ಘಟಕ (Storage Area) ವನ್ನು ಅಳವಡಿಸಿಕೊಳ್ಳುವುದು.

**ವಿಶೇಷ ಸೂಚನೆ:** ಎಲ್ಲಾ ಶಾಲಾ ಕೊಠಡಿಗಳ (ಅಡುಗೆ ಕೋಣೆಯನ್ನು ಒಳಗೊಂಡಂತೆ) ಮೇಲ್ಛಾವಣಿ ದುರಸ್ಥಿ ಕಾಮಗಾರಿಯ ಅಂದಾಜು ಪಟ್ಟಿಯಲ್ಲಿ 05 ವರ್ಷಗಳ ಅವಧಿಗೆ ನಿರ್ವಹಣಾ (O&M) ನಿಭಂದನೆಯನ್ನು ಮಾಡಿಕೊಳ್ಳತಕ್ಕದ್ದು. ಹಾಗೂ ಸದರಿ ಕಾಮಗಾರಿಗಳಿಗೆ Staggered Payment ವಿಧಾನವನ್ನು ಅಳವಡಿಸಿಕೊಳ್ಳತಕ್ಕದ್ದು. ಇದರ ಕುರಿತು ಮಾದರಿ ಟೆಂಡರ ಡಾಕ್ಯುಮೆಂಟನ್ನು ಮುಂದಿನ ದಿನಗಳಲ್ಲಿ ನೀಡಲಾಗುವುದು.

(6) **'ಅವಶ್ಯಕ ಭೌತಿಕ ಸೌಲಭ್ಯ'**ಗಳಲ್ಲಿ ಮುಂದಿನ ಅಂಶಗಳನ್ನು ಪರಿಗಣಿಸಿದೆ. (1) ಶಾಲಾ ಕಟ್ಟಡಕ್ಕೆ ಕುಡಿಯುವ ನೀರಿನ ಸಂಗ್ರಹಣಾ Over head ಟ್ಯಾಂಕ್ /Syntex ವ್ಯವಸ್ಥೆಯನ್ನು ಒದಗಿಸುವುದು (WASH-Water Sanitation and Hygiene guidelines from WHO, ಇದರ ಮಾದರಿಯಲ್ಲಿ.) (2) ಆಟದ ಮೈದಾನದ ನಿರ್ಮಾಣ (3) ಶಾಲಾ ತಡೆಗೋಡೆ (ಕಂಪೌಂಡ್) ನಿರ್ಮಾಣ,

(4) ಮಳೆನೀರು ಕೋಯ್ಲು ವ್ಯವಸ್ಥೆ (Underground tank for Rain Water Harvesting facility) ಹಾಗೂ (5) ಮುಖ್ಯ ಶಿಕ್ಷಕರ ಕೊಠಡಿ.

**ವಿಶೇಷ ಸೂಚನೆ:** ಮೇಲ್ಕಂಡ ಸೌಲಭ್ಯ (2), (3) & (4) ಗಳನ್ನು ಗ್ರಾಮೀಣ ಭಾಗಗಳಲ್ಲಿ ಮಹಾತ್ಮಗಾಂಧಿ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ (MGNREGS) ಅಡಿಯಲ್ಲಿ ತೆಗೆದುಕೊಳ್ಳುವುದು. ನಗರ ಪ್ರದೇಶಗಳಲ್ಲಿ ಕ.ಕ.ಪ್ರ.ಅ.ಮಂಡಳಿಯ ಅಕ್ಷರ ಆವಿಷ್ಕಾರ ಯೋಜನೆಯ ಅನುದಾನವನ್ನು ಸದರಿ ಕಾಮಗಾರಿಗಳಿಗೆ ಬಳಸಿಕೊಳ್ಳಲು ಅವಕಾಶವಿದೆ.

(7)'ಹೆಚ್ಚುವರಿ ಭೌತಿಕ ಸೌಲಭ್ಯ'ಗಳಲ್ಲಿ ಮುಂದಿನ ಅಂಶಗಳನ್ನು ಪರಿಗಣಿಸಿದೆ. (1) ಸಿಬ್ಬಂದಿ ಕೊಠಡಿ ಉನ್ನತೀಕರಣ (2) ಸಿಬ್ಬಂದಿ ಶೌಚಾಲಯ, (3) ಮಕ್ಕಳಿಗೆ ಭೋಜನಾಲಯ ವ್ಯವಸ್ಥೆ/ಕೊಠಡಿ, (4) ಕೈ ತೊಳೆಯುವ ವ್ಯವಸ್ಥೆ, ಹಾಗೂ (5) ಪೌಷ್ಠಿಕ ತೋಟ.

**ವಿಶೇಷ ಸೂಚನೆ:** ಮೇಲ್ಕಂಡ ಸೌಲಭ್ಯ (3) & (4) ಗಳನ್ನು ಗ್ರಾಮೀಣ ಭಾಗಗಳಲ್ಲಿ ಮಹಾತ್ಮಗಾಂಧಿ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ (MGNREGS) ಅಡಿಯಲ್ಲಿ ತೆಗೆದುಕೊಳ್ಳುವುದು. ನಗರ ಪ್ರದೇಶಗಳಲ್ಲಿ ಕ.ಕ.ಪ್ರ.ಅ.ಮಂಡಳಿಯ ಅಕ್ಷರ ಆವಿಷ್ಕಾರ ಯೋಜನೆಯ ಅನುದಾನವನ್ನು ಸದರಿ ಕಾಮಗಾರಿಗಳಿಗೆ ಬಳಸಿಕೊಳ್ಳಲು ಅವಕಾಶವಿದೆ.

(ಆ) **'ಗುಣಾತ್ಮಕ ಸೌಲಭ್ಯ'ಗಳು (Soft Component):** ಗಳಲ್ಲಿ ಮುಂದಿನ ಅಂಶಗಳನ್ನು ಪರಿಗಣಿಸಬಹುದಾಗಿದೆ.

| ಕನಿಷ್ಠ ಸೌಲಭ್ಯಗಳು | ಅವಶ್ಯಕ ಸೌಲಭ್ಯಗಳು | ಅಗತ್ಯ ಸೌಲಭ್ಯಗಳು | ಹೆಚ್ಚುವರಿ ಸೌಲಭ್ಯಗಳು |
|---|---|---|---|
| 1. ದ್ವಿ-ಭಾಷಾ ಬೋಧನಾ ಶಿಕ್ಷಕರು (Bilingual - English medium) | 6. ಕ್ರೀಡಾ ಕೋಣೆಗಳು: ಸುಧಾರಣೆ ಹಾಗೂ ಉಪಕರಣಗಳು | 11. ಬೋಧನಾ ಕಲಿಕಾ ಕೇಂದ್ರ (TLC) | 16. ಅಭ್ಯುದಯ– Bridge Courses. |
| 2. ECCE Teachers | 7. ಕಂಪ್ಯೂಟರ್‌ಕೋಣೆ: ಸುಧಾರಣೆ ಹಾಗೂ ಉಪಕರಣಗಳು | 12. Computer instructors / Courses | 17. Career Guidance Experts/ Courses/ NTSE/ NMMS |
| 3. NSQF ಸಲಕರಣಗಳು (9ನೇ ತರಗತಿಯಿಂದ) | 8. ಕಲಿಕಾ ಸಾಮಗ್ರಿಗಳು (TLM) | 13. ಸೌರಶಕ್ತಿ ವ್ಯವಸ್ಥೆ | 18. Green & Soft Boards |
| 4. ಅಡುಗೆ ಪರಿಕರಗಳು (MDM) | 9. ಮಕ್ಕಳ ಪೌಷ್ಠಿಕತೆ | 14. ಮಕ್ಕಳ ಸಮಗ್ರ ಆರೋಗ್ಯ ತಪಾಸಣೆ (RBSK ಮಾದರಿಯಲ್ಲಿ) | 19. SRC (School Readiness Centre) –ಅವಶ್ಯಕ ಪರಿಕರಗಳು |
| 5. ಡ್ಯೂವೆಲ್‌ಡೆಸ್ಕ (SDP) | 10. ವಿಜ್ಞಾನ ಪ್ರಯೋಗಾಲಯ: ಸುಧಾರಣೆ ಹಾಗೂ ಉಪಕರಣಗಳು | 15. Projectors / Integrated LED Display | 20. ಇತರೆ |

- ಇದರಲ್ಲಿ ಸ್ಮಾರ್ಟ್ ಕ್ಲಾಸ್ ಗಳನ್ನು ಪ್ರಸ್ತಾಪಿಸಿದಲ್ಲಿ ಶಿಕ್ಷಣ ಇಲಾಖೆಯ ಮಾನದಂಡಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು ಹಾಗೂ ಸಂಪೂರ್ಣ ಸುರಕ್ಷಿತವಾಗಿರುವ ಕೊಠಡಿಗಳನ್ನು ಆಯ್ಕೆ ಮಾಡಿಕೊಳ್ಳತಕ್ಕದ್ದು.
- **ಇನ್ನೂ ಹೆಚ್ಚಿನ ಗುಣಾತ್ಮಕ ಸೌಲಭ್ಯಗಳ ಕುರಿತಾಗಿ ಹಾಗೂ ಈ ಎಲ್ಲಾ ಸೌಲಭ್ಯಗಳ ವಿವರವಾದ ದರಪಟ್ಟಿಯ ಮಾಹಿತಿಯನ್ನು ಈ ಸುತ್ತೋಲೆಯೊಂದಿಗೆ Annexure ನಲ್ಲಿ ಅಡಕಗೊಳಿಸಿದೆ.**

- ಕ.ಕ.ಪ್ರ.ಅ.ಮಂಡಳಿಯ ಮೈಕ್ರೋ & ಮ್ಯಾಕ್ರೋ ಯೋಜನೆಯ ಅನುದಾನದಡಿಯಲ್ಲಿ ಕನಿಷ್ಠ 50% ಅನುದಾನವನ್ನು ಗುಣಾತ್ಮಕ ಸೌಲಭ್ಯಗಳು ಅಂದರೆ Soft Component ಗಳಿಗಾಗಿ ಕಡ್ಡಾಯವಾಗಿ ಮೀಸಲಿರಿಸಿ ಕ್ರಿಯಾಯೋಜನೆಯನ್ನು ತಯ್ಯಾರಿಸುವುದು.
- ಪೂರ್ವ ಪ್ರಾಥಮಿಕ ತರಗತಿಗಳನ್ನು ಪ್ರಾರಂಭಿಸಲು ಹಾಗೂ ಎಲ್ಲಾ ಶಾಲೆಗಳನ್ನು ಅಂದರೆ ಪೂರ್ವ ಪ್ರಾಥಮಿಕ, ಪ್ರಾಥಮಿಕ, ಹಿರಿಯ ಪ್ರಾಥಮಿಕ & ಪ್ರೌಢ ಶಾಲೆಗಳನ್ನು ದ್ವಿ-ಭಾಷಾ (Bilingual) ಶಾಲೆಗಳನ್ನಾಗಿ ಪರಿವರ್ತಿಸಲು, ಆಂಗ್ಲ ಭಾಷಾ ಬೋಧನೆಗೆ ಅವಶ್ಯಕವಿರುವ ಕ್ರಮಗಳನ್ನು ಅನುಸರಿಸುವುದು.
- ರಾಜ್ಯದ ಆಯ್ದ 262 ಸರಕಾರಿ ಪ್ರಾಥಮಿಕ ಶಾಲೆಗಳಲ್ಲಿ ಪೂರ್ವ ಪ್ರಾಥಮಿಕ ಶಾಲೆಗಳನ್ನು ಪ್ರಾರಂಭಿಸಲು ಸರಕಾರವು ನಿರ್ಧರಿಸಿದ್ದು, ಇದರಲ್ಲಿ ಕಲಬುರಗಿ ವಿಭಾಗಕ್ಕೆ 35 ಶಾಲೆಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಇವುಗಳಿಗೆ ಅಗತ್ಯ ಸೌಲಭ್ಯಗಳನ್ನು ಒದಗಿಸಲು ಸರಕಾರದ ನೆರವು ದೊರೆಯುವುದರಿಂದ, ಈ ಶಾಲೆಗಳು ಮತ್ತೊಮ್ಮೆ ಪುನರಾವರ್ತನೆ ಆಗದ ರೀತಿಯಲ್ಲಿ ಕ್ರಮವಹಿಸುವುದು.
- ಹೊಬಳಿಗೆ ಒಂದು ಶಾಲೆಯನ್ನು ಮಾತ್ರ ಆಯ್ಕೆ ಮಾಡಿ Teacher Learning Centre (TLC) ಪ್ರಾರಂಭಿಸಲು ಬೇಕಾಗುವಂತಹ ಸೌಲಭ್ಯಗಳನ್ನು ಒದಗಿಸುವುದು.
- ಎಲ್ಲಾ ಪ್ರೌಢಶಾಲೆಗಳಲ್ಲಿ ಕಡ್ಡಾಯವಾಗಿ NSQF ಸಲಕರಣಗಳ ವ್ಯವಸ್ಥೆಯನ್ನು ಕಲ್ಪಿಸುವುದು.
- ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ವಿಜ್ಞಾನ ಪ್ರಯೋಗಾಲಯ ಇಲ್ಲದಿದ್ದರೂ ಸಹ ವಿಜ್ಞಾನ ಪ್ರಯೋಗಾಲಯದ ಉಪಕರಣಗಳನ್ನು ಒದಗಿಸಲು ಅವಕಾಶವಿದೆ.

## C) ಕ್ರಿಯಾ ಯೋಜನೆ ರೂಪಿಸುವಲ್ಲಿ ಅಳವಡಿಸಿಕೊಳ್ಳಬೇಕಾದ ಹಂತಗಳು ಹಾಗೂ ಅಂಶಗಳು:

ಮೈಕ್ರೊ ಯೋಜನೆ ಅಡಿಯಲ್ಲಿ 'ಅಕ್ಷರ ಆವಿಷ್ಕಾರ' ದ ಅನುಷ್ಠಾನಕ್ಕಾಗಿ ವಿಧಾನಸಭಾ ಕ್ಷೇತ್ರದ ಹಂತದಲ್ಲಿ ಕೆಳಕಂಡಂತೆ ತಾಂತ್ರಿಕ ಸಮಿತಿಯನ್ನು ಈ ಮೂಲಕ ಕಾರ್ಯಗತಗೊಳಿಸಲಾಗಿದೆ.

| ಅಕ್ಷರ ಆವಿಷ್ಕಾರ: ತಾಂತ್ರಿಕ ಸಮಿತಿ | | |
|---|---|---|
| 01 | ಅಧ್ಯಕ್ಷರು | ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕ ಪಂಚಾಯಿತಿ. |
| 02 | ಸದಸ್ಯ ಕಾರ್ಯದರ್ಶಿ | ಕ್ಷೇತ್ರ ಶಿಕ್ಷಣಾಧಿಕಾರಿಗಳು |
| 03 | ಸದಸ್ಯರು | ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪೊಯೋಗಿ ಇಲಾಖೆ ಉಪ ವಿಭಾಗ |
| 04 | ಸದಸ್ಯರು | ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಪಂ.ರಾ.ಇಂ ಇಲಾಖೆ ಉಪ ವಿಭಾಗ |
| 05 | ಸದಸ್ಯರು | ಸಹಾಯಕ ನಿರ್ದೇಶಕರು, ಮಹಾತ್ಮಗಾಂಧಿ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ (MGNREGS) |
| 06 | ಸದಸ್ಯರು | KKRDB District PMC Engineers |

ಸದರಿ ತಾಂತ್ರಿಕ ಸಮಿತಿಯು ಕರಡು ಕ್ರಿಯಾ ಯೋಜನೆ ಸಿದ್ದಪಡಿಸಬೇಕಾಗಿದ್ದು, ತಮಗೆಲ್ಲಾ ಅರ್ಥೈಸಿಕೊಳ್ಳಲು ಸುಲಭವಾಗುವಂತೆ ಕಲಬುರಗಿ ಜಿಲ್ಲೆಯ ಅಫಜಲಪೂರ ವಿಧಾನಸಭಾ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಕ್ರಿಯಾಯೋಜನೆಯ ಮಾದರಿಯನ್ನು ರೂಪಿಸಲಾಗಿದೆ. ಆದ್ದರಿಂದ ಕಾರ್ಯಕ್ರಮದ ಕ್ರಿಯಾಯೋಜನೆಯನ್ನು ರೂಪಿಸಲು ಕೆಳಗಿನಂತೆ ಮಾರ್ಗಸೂಚಿಯನ್ನು ಅನುಸರಿಸಲು ಕೋರಿದೆ. ಈ ರೀತಿ ರೂಪಿಸಲಾಗುವ ಕ್ರಿಯಾಯೋಜನೆಯನ್ನು ಜಿಲ್ಲಾ ಪಂಚಾಯತಿಯ ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳು ಅನುಮೋದಿಸಬೇಕಾಗಿರುತ್ತದೆ.

ಮೇಲ್ಕಂಡ ಮೂಲಭೂತ ಭೌತಿಕ ಸೌಲಭ್ಯಗಳು (Physical Components) ಮತ್ತು ಗುಣಾತ್ಮಕ ಸೌಲಭ್ಯಗಳು(Soft Components)ನ್ನೊಳಗೊಂಡಂತೆ ಪ್ರತಿಯೊಂದು ವಿಧಾನ ಸಭಾ ಕ್ಷೇತ್ರಕ್ಕೆ ಅನ್ವಯವಾಗುವಂತೆ ಹಾಗೂ ಜಿಲ್ಲಾ ಮಟ್ಟದಲ್ಲಿ ಮ್ಯಾಕ್ರೋ ಅನುದಾನಕ್ಕೆ ಅನ್ವಯವಾಗುವಂತೆ ಅನುಬಂಧ-1 ರಿಂದ 10 ರ ಅನ್ವಯ Template ಅನ್ನು ಸಿದ್ಧಪಡಿಸಲಾಗಿದೆ. DDPI / BEO's /ತಾಂತ್ರಿಕ ಸಮಿತಿಯ ಸದಸ್ಯರು ಈ ಅನುಬಂಧದಲ್ಲಿ ಅವಶ್ಯಕ ಸೌಲಭ್ಯಗಳ ಮಾಹಿತಿಯನ್ನು ಭರ್ತಿ ಮಾಡಿ ಕರಡು ಕ್ರಿಯಾಯೋಜನೆ ರೂಪಿಸುವುದು.

**ಹಂತ-1: ಶಾಲಾ ಮಕ್ಕಳ ಸಂಖ್ಯೆಗನುಗುಣವಾಗಿ ಇಳಿಕೆ ಕ್ರಮದಲ್ಲಿ** (Descending order of students strength) **ಪಟ್ಟಿ ತಯಾರಿ:**

ನಿಗಧಿಪಡಿಸಿದ ಅನುದಾನದಲ್ಲಿ ಅಗತ್ಯ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸುವ ದೃಷ್ಟಿಯಿಂದ ಶಾಲೆಗಳ ಆಯ್ಕೆಯಲ್ಲಿ ಮಕ್ಕಳ ಸಂಖ್ಯೆಯನ್ನು ಮಾನದಂಡವಾಗಿ ಇಟ್ಟುಕೊಳ್ಳುವುದು.

**ಷರತ್ತು:**

(1) 1 ರಿಂದ 10ನೇ ತರಗತಿ ಇರುವ ಶಾಲೆಗಳು, (2) ಕೇವಲ ಪ್ರೌಢ ಶಾಲೆಗಳು, (3) ಪ್ರಾಥಮಿಕ ಮತ್ತು ಮಾಧ್ಯಮಿಕ ಒಟ್ಟಿಗೆ ಇರುವ ಶಾಲೆಗಳು, ಹಾಗೂ (4) ಪ್ರಾಥಮಿಕ ಶಾಲೆಗಳು, ಈ ರೀತಿ ವರ್ಗೀಕರಿಸಿ, ಇದರಲ್ಲಿ 1 ರಿಂದ 10ನೇ ತರಗತಿ ಇರುವ ಶಾಲೆಗಳಿಗೆ ಪ್ರಥಮಾದ್ಯತೆ ನೀಡತಕ್ಕದ್ದು.

**ಉದಾ:** ಈ ಯೋಜನೆಯಡಿ ಅಫಜಲಪೂರ ವಿಧಾನ ಸಭಾ ಕ್ಷೇತ್ರಕ್ಕೆ ರೂ. 1997.30 ಲಕ್ಷಗಳು ಅನುದಾನವನ್ನು ಅಕ್ಷರ ಆವಿಷ್ಕಾರದ ಮೈಕ್ರೋ ಯೋಜನೆ ಅಡಿಯಲ್ಲಿ ನಿಗದಿಪಡಿಸಿದ್ದು, ವಿಧಾನ ಸಭಾ ಕ್ಷೇತ್ರದಲ್ಲಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳು ಸೇರಿ ಒಟ್ಟು **195** ಶಾಲೆಗಳಲ್ಲಿ 200 ಕ್ಕಿಂತ ಹೆಚ್ಚು ಮಕ್ಕಳಿರುವ (ಟಾಪ್ 50) ಶಾಲೆಗಳನ್ನು ಆಯ್ಕೆ ಮಾಡಿಕೊಂಡು ಕನಿಷ್ಠ ಮೂಲಭೂತ ಸೌಲಭ್ಯಗಳ ಪೂರೈಕೆಗಾಗಿ ಕ್ರಿಯಾ ಯೋಜನೆಯನ್ನು ರೂಪಿಸಿಕೊಳ್ಳಲಾಗಿದೆ

**ಹಂತ-2: ವಿಧಾನ ಸಭಾ ಕ್ಷೇತ್ರದ ಶಾಲೆಗಳ ವರ್ಗೀಕರಣ ಹಾಗೂ 1 ರಿಂದ 10 ಆದ್ಯತೆ ಶಾಲೆಗಳ ದಾಖಲಾತಿ ವಿವರ:**

ವಿಧಾನ ಸಭಾ ಕ್ಷೇತ್ರದಲ್ಲಿ ಇರುವ ಸರಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳ 250 ಕ್ಕಿಂತ ಹೆಚ್ಚು ಮಕ್ಕಳು, 201 ರಿಂದ 250ರ ವರೆಗಿನ, 151 ರಿಂದ 200, 101 ರಿಂದ 150, 51 ರಿಂದ 100 ಹಾಗೂ 50 ಮಕ್ಕಳಿಗಿಂತ ಕಡಿಮೆ ಇರುವ ಮಕ್ಕಳ ಪಟ್ಟಿಯನ್ನು ಸಿದ್ದಪಡಿಸಿಕೊಳ್ಳುವುದು.

ಉದಾ: ಅಫಜಲಪೂರು ತಾಲ್ಲೂಕಿನ ಶಾಲೆಗಳ ವರ್ಗೀಕರಣ ಈ ಕೆಳಗಿನಂತಿದೆ.

| SL NO | EDUCATION LEVEL | TOTAL SCHOOL WITH STUDENT STRENGTH | | | | | | TOTAL | REMARS |
|---|---|---|---|---|---|---|---|---|---|
| | | 250 | 201 - 250 | 151 -200 | 101 -150 | 51 -100 | <=50 | | |
| 1 | Primary | 0 | 0 | 0 | 4 | 29 | 48 | 81 | |
| 2 | Primary with Upper Primary | 30 | 14 | 11 | 8 | 11 | 8 | 82 | |
| 3 | Upper Primary only | 0 | 0 | 0 | 0 | 1 | 0 | 1 | |
| 4 | Up.Pr. Secondary and Hgher Sec | 0 | 0 | 0 | 0 | 0 | 0 | 0 | |
| 5 | Upper Pr. and Secondary | 1 | 0 | 0 | 0 | 0 | 0 | 0 | |
| 6 | Secondary Only | 7 | 2 | 6 | 7 | 1 | 0 | 23 | |
| 7 | Secondary with Higher Secondary | 0 | 0 | 0 | 0 | 0 | 0 | 0 | |
| 8 | Pr.Up Pr. Secondary Only | 7 | 0 | 0 | 0 | 0 | 0 | 0 | |
| 9 | Pr.with Up.Pr. sec. and H.Sec. | 0 | 0 | 0 | 0 | 0 | 0 | 0 | |
| | **TOTAL** | **45** | **16** | **17** | **19** | **42** | **56** | **195** | |

**ಷರತ್ತುಗಳು:**

(1) 1 ರಿಂದ 10ನೇ ತರಗತಿ ಇರುವ ಶಾಲೆಗಳನ್ನು ಆದ್ಯತೆ ಮೇರೆಗೆ ಆಯ್ಕೆ ಮಾಡಿಕೊಳ್ಳುವುದು. ಇದರಲ್ಲಿ ಕರ್ನಾಟಕ ಪಬ್ಲಿಕ್ ಶಾಲೆ ಹಾಗೂ ಆದರ್ಶ ವಿದ್ಯಾಲಯಗಳು ಸಹ ಸೇರಿಸತಕ್ಕದ್ದು. ಆದರೆ ಯಾವುದೇ ಕಾಮಗಾರಿ/ ಖರೀದಿಸುವ ವಸ್ತುಗಳು ಪುನರಾವರ್ತನೆ (Duplication) ಆಗತಕ್ಕದ್ದಲ್ಲ.

(2) 2ನೇ ಆದ್ಯತೆಯಾಗಿ ಸರಕಾರಿ ಪ್ರೌಢ ಶಾಲೆಗಳನ್ನು ಆಯ್ಕೆ ಮಾಡಿಕೊಳ್ಳುವುದು. ಇನ್ನೂ ಅವಶ್ಯವಿದ್ದಲ್ಲಿ ಹಿರಿಯ ಪ್ರಾಥಮಿಕ ಶಾಲೆಗಳನ್ನು ಆಯ್ಕೆ ಮಾಡಿಕೊಳ್ಳುವುದು.

**(3) ವರ್ಗೀಕರಣದ ನಂತರ ಅತಿ ಹೆಚ್ಚು ಮಕ್ಕಳಿರುವ ಟಾಪ 50 ಶಾಲೆಗಳನ್ನು ಪ್ರಸ್ತುತ ಸಾಲಿಗೆ ಅಂದರೆ 2023-24 ಗೆ ಆಯ್ಕೆ ಮಾಡಿಕೊಳ್ಳುವುದು. ಮುಂದುವರೆದು, 50 ಶಾಲೆಗಳನ್ನು ಪ್ರತಿ ವರ್ಷದಂತೆ ಹಂತ ಹಂತವಾಗಿ ಮುಂಬರುವ 04 ವರ್ಷಗಳಲ್ಲಿ ಆಯ್ಕೆ ಮಾಡಿ 05 ವರ್ಷದ ಅವಧಿಯಲ್ಲಿ ವಿಧಾನಸಭಾ ಕ್ಷೇತ್ರದ ಎಲ್ಲಾ ಶಾಲೆಗಳಲ್ಲಿಯೂ ಸಮಗ್ರ ಅಭಿವೃದ್ದಿಯನ್ನು ಹಮ್ಮಿಕೊಳ್ಳುವುದು.**

**ಹಂತ-3: ಮೂಲಭೂತ ಸೌಲಭ್ಯಗಳು ಗುರುತಿಸುವ ಅವಶ್ಯಕ ಅಂಶಗಳು:**

ಜಿಲ್ಲಾ ಉಪ ನಿರ್ದೇಶಕರು (ಆಡಳಿತ) ರವರು ಜಿಲ್ಲೆಯ ಎಲ್ಲಾ ವಿಧಾನ ಸಭಾ ಕ್ಷೇತ್ರವಾರು ಶಾಲಾ ಪಟ್ಟಿಯನ್ನು ತಯಾರಿಸಿ ಸಂಬಂಧಿಸಿದ ತಾಂತ್ರಿಕ ಸಮಿತಿಯು ಶಾಸಕರ ಅನುಮೋದನೆ ಪಡೆಯಬೇಕಾಗಿರುತ್ತದೆ. ವಿಧಾನ ಸಭಾ ಕ್ಷೇತ್ರವಾರು ಹಂಚಿಕೆಯಾದ ಅನುದಾನದ ವಿವರವನ್ನು ಸಂಬಂಧಿಸಿದ ಜಿಲ್ಲಾಧಿಕಾರಿಗಳ ಕಚೇರಿಯಿಂದ ಪಡೆದು ಕ್ರಿಯಾ ಯೋಜನೆ ತಯಾರಿಸುವುದು.

ವಿಧಾನ ಸಭಾ ಕ್ಷೇತ್ರದಲ್ಲಿ ಕನಿಷ್ಠ ಮೂಲಭೂತ ಸೌಲಭ್ಯ/ ಬೋಧನೆಗೆ ಪೂರಕವಾದ ಸೌಲಭ್ಯಗಳಾಗಿ ಈ ಅಂಶಗಳನ್ನು ಪರಿಗಣಿಸುವುದು.

**ಷರತ್ತುಗಳು:**

1. ಎಸ್.ಎ.ಟಿ.ಎಸ್ ಆಧಾರಿತ ಮಕ್ಕಳ ಸಂಖ್ಯೆಗನುಣವಾಗಿ ಶಾಲಾವಾರು ಮಕ್ಕಳ ಹಾಗೂ ಮೂಲಭೂತ ಸೌಕರ್ಯಗಳ ಮಾಹಿತಿ ಇರುವ ಬಗ್ಗೆ ಖಚಿತಪಡಿಸಿಕೊಳ್ಳುವದು.

2. ಮಕ್ಕಳ ಸಂಖ್ಯೆಗೆ ಅನುಗುಣವಾಗಿ ಲಭ್ಯವಿರುವ ಸುಧಾರಣೆಗೊಳಿಸಬಹುದಾದ ಕೊಠಡಿಗಳನ್ನು ಆದ್ಯತೆಯ ಮೇರೆಗೆ ಮೊದಲು ಪರಿಗಣಿಸುವುದು. ಕಾಮಗಾರಿಗಳ ಕ್ರಿಯಾಯೋಜನೆ ಹಾಗೂ ಅನುಷ್ಠಾನವನ್ನು ಬಿಡಿ ಬಿಡಿಯಾಗಿ (Split/ Piece work) ಮಾಡಕೂಡದು.
3. ಹೊಸ ಕೋಣೆಗಳ ಬೇಡಿಕೆ ಇರುವ ಶಾಲೆಗಳಲ್ಲಿ ಇನ್ನಿತರ ಯಾವುದೇ ಯೋಜನೆ/ ಕಾರ್ಯಕ್ರಮದಡಿಯಲ್ಲಿ ಹೊಸ ಕೋಣೆಗಳ ಮಂಜೂರಾತಿ ಆಗಿರತಕ್ಕದ್ದಲ್ಲ ಎಂಬುದನ್ನು ಖಚಿತಪಡಿಸಿಕೊಳ್ಳುವುದು, ಅಂದರೆ ಪುನರಾವರ್ತನೆ ಆಗಕೂಡದು. ಫಾರ್ಮ-1 ರಲ್ಲಿ ಜಿಲ್ಲಾ ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳ ದೃಢೀಕರಣದೊಂದಿಗೆ ಹೊಸ ಕೊಠಡಿ ನಿರ್ಮಾಣಕ್ಕೆ ಸಲ್ಲಿಸಿರುವ ಪ್ರಸ್ತಾವನೆಯನ್ನು ಹೊರತುಪಡಿಸಿ ಹೊಸ ಕೋಣೆಗಳ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುವಂತಿಲ್ಲ.
4. **ಎಲ್ಲಾ 05 ವರ್ಷಗಳ ಶಾಲೆಗಳ ಆದ್ಯತೆ ಪಟ್ಟಿಯನ್ನು ಮುಂಚಿತವಾಗಿಯೇ ತಯಾರಿಸಿ ಮಾನ್ಯ ಶಾಸಕರ ಅನುಮೋದನೆ ಪಡೆದುಕೊಳ್ಳುವುದು.**

**ಸೂಚನೆ:** ಕಾರ್ಯದೇಶ ನೀಡಲಾಗುವ ಗುತ್ತಿಗೆದಾರರಿಗೆ ಕಾಮಗಾರಿಯ ನಿರ್ವಹಣೆಯ ಕುರಿತು ಕ.ಕ.ಪ್ರ.ಅ.ಮಂಡಳಿಯ ವತಿಯಿಂದ ನಿಗಧಿತ ಗುಣಮಟ್ಟ ಕಾಪಾಡುವ ಸಲುವಾಗಿ ವಿಶೇಷ ತರಬೇತಿಯನ್ನು ನೀಡಲಾಗುವುದು.

**ಹಂತ-4: 'ಅಕ್ಷರ ಆವಿಷ್ಕಾರ' ಯೋಜನೆಯಡಿ ವಿಧಾನ ಸಭಾ ಕ್ಷೇತ್ರದ ಆಯ್ದ ಶಾಲೆಗಳಿಗೆ ತಾಂತ್ರಿಕ ಸಮಿತಿಯಿಂದ ಭೌತಿಕ ಸ್ಥಳ ಪರಿಶೀಲನೆ:**

ಮೇಲೆ ತಿಳಿಸಲಾದಂತೆ ರಚಿಸಿರುವ ತಾಂತ್ರಿಕ ಸಮಿತಿಯು ಆದ್ಯತೆಮೇಲೆ ಆಯ್ಕೆಯಾದ ಶಾಲೆಗಳ ಸ್ಥಾನಿಕ ಸ್ಥಳ ಪರಿಶೀಲನೆ ನಡೆಸಿ, ಅಂದಾಜು ಪಟ್ಟಿಯನ್ನು ತಯಾರಿಸುವುದು.

**ಷರತ್ತುಗಳು:**

1. ಸ್ಥಳ ಪರಿಶೀಲನೆ ನಡೆಸಿ ಅಗತ್ಯ ಸೌಲಭ್ಯಗಳನ್ನು ಅಂತಿಮಗೊಳಿಸುವ ಪೂರ್ವ ಆಯಾ ಶಾಲಾ ಮುಖ್ಯೋಪಾಧ್ಯಾಯರೊಡನೆ ಚರ್ಚಿಸಿ, ಅವರ ದೃಢೀಕರಣ ಪಡೆಯತಕ್ಕದ್ದು.
2. ಕಾಮಗಾರಿಗಳ ಅನುಷ್ಠಾನದ ಪೂರ್ವ ಸದರಿ ಶಾಲೆಯ/ಸ್ಥಳದ ಛಾಯಾಚಿತ್ರಗಳನ್ನು ಅಲ್ಬಮ್ ರೂಪದಲ್ಲಿ ಸಂಗ್ರಹಿಸಿ, ಬಿಲ್ಲು ಪಾವತಿ ಸಮಯದಲ್ಲಿ ಪರಿಶೀಲನೆ ಮಾಡುವುದು. ಕಾಮಗಾರಿ ಪೂರ್ಣಗೊಂಡ ನಂತರದ ಛಾಯಾಚಿತ್ರಗಳನ್ನು ಪಡೆದು ಸದರಿ ಅಲ್ಬಮ್‌ನಲ್ಲಿ ಸಂಗ್ರಹಿಸುವುದು.

**ಹಂತ-5: ಅನುಸೂಚಿತ ದರಗಳನ್ವಯ Line Estimate ಅನ್ನು ತಯಾರಿಸುವುದು:**

2023-24ನೇ ಸಾಲಿಗಾಗಿ ನಿಗದಿಪಡಿಸಿದ ಅನುದಾನದಲ್ಲಿ ಕೈಗೊಳ್ಳುವ ಕಾಮಗಾರಿಗಳಿಗಾಗಿ ಹಾಗೂ ಖರೀದಿಸಲು ಇಚ್ಚಿಸುವ ಸಾಮಗ್ರಿಗಳಿಗೆ ಸಮಗ್ರ ಶಿಕ್ಷಣ – ಕರ್ನಾಟಕ, ಬೆಂಗಳೂರು ಇವರು ವಾರ್ಷಿಕ ಕ್ರಿಯಾ ಯೋಜನೆ ಮತ್ತು ಆಯವ್ಯಯ 2023-24ಕ್ಕಾಗಿ ಪರಿಗಣಿಸಿರುವ ಸಿವಿಲ್ ಕಾಮಗಾರಿ ದರ ನಿಗದಿಪಡಿಸಿರುವುದನ್ನು ಗಣನೆಗೆ ತೆಗೆದುದುಕೊಳ್ಳುವುದು. ಕರಡು ಕ್ರಿಯಾಯೋಜನೆ ಹಾಗೂ ಅಂದಾಜು ಪಟ್ಟಿಯನ್ನು ಅಂತಿಮಗೊಳಿಸಿ, ಮಾನ್ಯ ಶಾಸಕರ ಅನುಮೋದನೆಗಾಗಿ ಸಲ್ಲಿಸುವುದು.

**ಪರತ್ತು:**

ಕಾಮಗಾರಿ ಅನುಷ್ಠಾನ ಇಲಾಖೆಯು ಪ್ರಸಕ್ತ ಸಾಲಿಗಾಗಿ ಸರಕಾರವು ನಿಗದಿಪಡಿಸಿದ ಶೆಡ್ಯೂಲ್ ರೇಟ್ಸ್ (D.S.R)ನ್ನು ಸಹ ಗಣನೆಗೆ ತೆಗೆದುಕೊಂಡು, ಯಾವುದು ದರ ಕಡಿಮೆ ಇದೆಯೋ ಅದನ್ನು ಅಳವಡಿಸಿಕೊಳ್ಳುವುದು.

**ಹಂತ-6: ಆಯ್ಕೆಯಾದ ಶಾಲೆಗಳ ಪರಿಶೀಲನಾ ವರದಿ ಆಧಾರದ ಮೇಲೆ ಕ್ರಿಯಾಯೋಜನೆ ಸಿದ್ಧಪಡಿಸಿ ಮಾನ್ಯ ಶಾಸಕರಿಗೆ ಸಲ್ಲಿಸಿ ಅನುಮೋದನೆ ಪಡೆಯುವುದು:**

ಹೀಗೆ ತಯಾರಿಸಿದ ಅಂದಾಜು ವೆಚ್ಚ ತಖ್ತೆಯನ್ನು ಮಾನ್ಯ ಶಾಸಕರ ಅನುಮೋದನೆ ಪಡೆದು, ನಂತರದ ಪ್ರಕ್ರಿಯೆಗೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್ ಇವರಿಗೆ ಸಲ್ಲಿಸುವುದು.

**ಹಂತ-7: ಜಿಲ್ಲಾ ಪಂಚಾಯತ್, ಕಾರ್ಯನಿರ್ವಾಹಕ ಅಧಿಕಾರಿಗಳಿಂದ ಕ್ರಿಯಾ ಯೋಜನೆಗೆ ಸಂಬಂಧಿಸಿದ ಪ್ರಸ್ತಾವನೆಗಳನ್ನು ಸಲ್ಲಿಸುವುದು.**

ಜಿಲ್ಲಾ ಪಂಚಾಯತ್‌ನ ಸಂಬಂದಪಟ್ಟ ಅನುಷ್ಠಾನಾಧಿಕಾರಿಗಳು/ಅಭಿಯಂತರರು ಕ್ರಿಯಾಯೋಜನೆ ತಯಾರಿಸಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಪ್ರಸ್ತಾವನೆ ಸಲ್ಲಿಸುವುದು.

ಶಿಕ್ಷಣ ವಲಯಕ್ಕೆ ಸಂಬಂದಿಸಿದ ಸಮಗ್ರ ಶಿಕ್ಷಣ ಕರ್ನಾಟಕ, ಜಿಲ್ಲಾ ಪಂಚಾಯತಿ ಅನುದಾನ, ತಾಲ್ಲೂಕು ಪಂಚಾಯತಿ ಅನುದಾನ, ನರೇಗಾ ಅನುದಾನ ಹಾಗೂ ಇನ್ನಿತರೆ ಕಾರ್ಯಕ್ರಮಗಳ ಅಡಿಯಲ್ಲಿ ಅನುಷ್ಠಾನಾಧಿಕಾರಿಗಳು ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಆಗಿರುತ್ತಾರೆ. ಆದ್ದರಿಂದ, ಕಾಮಗಾರಿಗಳ ಪುನಾರವರ್ತನೆಯನ್ನು ತಡೆಯಲು ಅಕ್ಷರ ಆವಿಷ್ಕಾರ ಯೋಜನೆಯ ಅಡಿಯಲ್ಲಿಯೂ ಸಹ ಜಿಲ್ಲಾ ಪಂಚಾಯತಿಯ ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳೆ ಕ್ರಿಯಾ ಯೋಜನೆಯ ಅನುಮೋದನೆ ಮಾಡಲಿದ್ದಾರೆ.

**ಹಂತ-8: ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯಿಂದ ಕ್ರಿಯಾ ಯೋಜನೆ ಅನುಮೋದನೆ.**

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಒಪ್ಪಿದ ಪ್ರಸ್ತಾವನೆಯನ್ನು ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಗೆ ಅನುಮೋದನೆಗಾಗಿ ಸಲ್ಲಿಸುವುದು.

**ಕಾಮಗಾರಿಗಳು ಪೂರ್ಣಗೊಂಡ ನಂತರ 3ನೇ ತಂಡದ ಪರಿಶೀಲನಾ ಸಮಿತಿ ರಚಿಸಿ, ಅವರಿಂದ ಗುಣಮಟ್ಟ ಖಾತ್ರಿ ವರದಿಯನ್ನು ಜಿಲ್ಲಾ ಪಂಚಾಯತಿಯ ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳು ಪಡೆಯುವುದು.**

1. ಈ ಪ್ರಕ್ರಿಯೆಯು ಪ್ರಸ್ತುತ ಆರ್ಥಿಕ ವರ್ಷದಲ್ಲಿ ಪೂರ್ಣಗೊಳಿಸಬೇಕಾಗಿರುವುದರಿಂದ ಫೆಬ್ರವರಿ-2024ರ ಪೂರ್ವದಲ್ಲಿ ಅನುದಾನ ಉಪಯೋಗಿತ ಪ್ರಮಾಣ ಪತ್ರ ಹಾಗೂ ಕಾಮಗಾರಿ ಗುಣಮಟ್ಟದ ಹಾಗೂ ಪೂರ್ಣಗೊಳಿಸಿದ ಪ್ರಮಾಣ ಪತ್ರಗಳ ಜೊತೆಗೆ ಅನುಷ್ಠಾನಾಧಿಕಾರಿಗಳು ಪೂರ್ಣ ವರದಿಯನ್ನು ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ ಹಾಗೂ ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ, ಕಲಬುರಗಿ ಇವರಿಗೆ ಒದಗಿಸುವುದು.

2. ಈ ಯೋಜನೆಯಡಿ ತೆಗೆದುಕೊಂಡ ಕಾಮಗಾರಿ ಮತ್ತು ಅದಕ್ಕೆ ತಗಲಿದ ವೆಚ್ಚದ ವಿವರ ಕುರಿತು ಸಂಬಂಧಿಸಿದ ಪ್ರತಿ ಶಾಲೆಯ ಮುಂಭಾಗದಲ್ಲಿ ಕಾಮಗಾರಿ ಫಲಕ (MGNREGA ಹಾಗೂ ಸರಕಾರದ ಇನ್ನಿತರೆ ಕಾಮಗಾರಿಗಳಲ್ಲಿ ಅನುಸರಿಸುವಂತೆ) ಹಾಕತಕ್ಕದ್ದು.
3. ಈ ಫಲಕದಲ್ಲಿ ಕಾಮಗಾರಿ ಪ್ರಾರಂಭವಾಗುವ ಮುನ್ನ ಗುತ್ತಿಗೆದಾರರ ಮಾಹಿತಿಯನ್ನು ನಮೂದಿಸುವುದು. ಕಾಮಗಾರಿಯ ಯಾವುದೇ ಹಂತದಲ್ಲಿ ಅನುಷ್ಠಾನದಲ್ಲಿ ಕುಂದುಕೊರತೆಗಳು ಉಂಟಾದಲ್ಲಿ, ಅಕ್ಷರ ಆವಿಷ್ಕಾರದ ಅಡಿಯಲ್ಲಿ ರೂಪಿಸಲಾಗುವ ಹೆಲ್ಪ್‌ಲೈನ್ ಸಂಖ್ಯೆಗೆ ದೂರನ್ನು ನೀಡಬಹುದಾಗಿರುತ್ತದೆ. ಸದರಿ ಹೆಲ್ಪ್‌ಲೈನ್ ಸಂಖ್ಯೆಯನ್ನು ಕಾಮಗಾರಿ ಫಲಕದಲ್ಲಿ ನಮೂದಿಸುವುದು.
4. ಸದರಿ ಹಂತಗಳ ಛಾಯಾಚಿತ್ರ ಹಾಗೂ ಗುಣಮಟ್ಟದ ವರದಿಯನ್ನು ಲೋಕೋಪಯೋಗಿ ಇಲಾಖೆಯ ಗುಣ ಭರವಸೆ ವಿಭಾಗ (PWD-QC) ದಿಂದ ಪಡೆಯುವುದು.

<u>ಮುಂದುವರೆದ ಹಂತ:</u> ಅಕ್ಟೋಬರ 1, 2023 ರಿಂದ ಮಾರ್ಚ 31, 2024ವರೆಗೆ 6 ತಿಂಗಳ ಅವಧಿಯಲ್ಲಿ ಪ್ರತಿ ತಿಂಗಳು ಸಂಬಂಧಿಸಿದ ಅನುಷ್ಠಾನಾಧಿಕಾರಿಗಳಿಂದ ಪ್ರಗತಿ ವರದಿ ಪಡೆದು, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಹಂತದಲ್ಲಿ ಪ್ರಗತಿ ಪರಿಶೀಲನೆ ನಡೆಸುವುದು. ಇದನ್ನು ಕಾರ್ಯಕ್ರಮದ ಸದಸ್ಯ ಕಾರ್ಯದರ್ಶಿಯಾಗಿ, ಆಯಾ ಜಿಲ್ಲಾ ಉಪ ನಿರ್ದೇಶಕರು, ಶಾಲಾ ಶಿಕ್ಷಣ ಇಲಾಖೆ ಇವರು ವರದಿಯನ್ನು ತಯಾರಿಸುವುದು ಮತ್ತು ಅನುಪಾಲಿಸುವುದು (Follow-up).

ಹಗರಿಬೊಮ್ಮನಹಳ್ಳಿ ವಿಧಾನ ಸಭಾ ಕ್ಷೇತ್ರದ ಭರ್ತಿ ಮಾಡಿದ ಅನುಬಂಧ 1 ರಿಂದ 10, ಗಳನ್ನು ಉದಾಹರಣೆಯಾಗಿ ಈ ಸುತ್ತೋಲೆಯೊಂದಿಗೆ ಅಡಕಗೊಳಿಸಲಾಗಿದೆ. ಅದನ್ನು ತಮ್ಮ ಕ್ಷೇತ್ರದ ಶಾಲೆಗಳಿಗೆ ಅನ್ವಯಿಸುವಂತೆ ಅವಲೋಕಿಸಿ ಕರಡು ಕ್ರಿಯಾಯೋಜನೆಯನ್ನು ತಯಾರಿಸಬಹುದಾಗಿದೆ.

## D) <u>'ಮ್ಯಾಕ್ರೊ' ಅನುದಾನದ ಅನುಷ್ಠಾನ:</u>

(i) ಮ್ಯಾಕ್ರೊ ಅನುದಾನದ ಅನುಷ್ಠಾನದಲ್ಲಿಯೂ ದಲ್ಲಿಯೂ ಸಹ ಮೇಲ್ಕಂಡ ಮಾರ್ಗಸೂಚಿಗಳು ಅನ್ವಯಿಸುತ್ತವೆ. ಆಯಾ ಜಿಲ್ಲಾ ಉಪ ನಿರ್ದೇಶಕರು ಮಾರ್ಗಸೂಚಿಯಂತೆ ಆಯ್ದ 50 ಶಾಲೆಗಳ ಕ್ರಿಯಾ ಯೋಜನೆ ಮಾನ್ಯ ಜಿಲ್ಲಾ ಉಸ್ತುವಾರಿ ಸಚಿವರ ಅನುಮೋದನೆಯ ನಂತರ ಅನುಷ್ಠಾನಾಧಿಕಾರಿಗಳಿಗೆ ಸಲ್ಲಿಸುವುದು. 'ಮೈಕ್ರೊ' ಅನುದಾನದ ಅಡಿಯಲ್ಲಿ ತೆಗೆದುಕೊಳ್ಳುವ ಶಾಲೆಯನ್ನು ಬಿಟ್ಟು, ಪುನರಾವರ್ತನೆ (Duplication) ಆಗದಂತೆ ಹೊಸ ಶಾಲೆಗಳನ್ನು ಆಯ್ಕೆ ಮಾಡುವುದು.

(ii) ಮಕ್ಕಳಲ್ಲಿ ಪೌಷ್ಠಿಕಾಂಶದ ಕೊರತೆಯನ್ನು ನಿವಾರಿಸಲು, ರಾಜ್ಯ ಸರಕಾರವು ವಾರದಲ್ಲಿ ಎರಡು ದಿವಸ ಮೊಟ್ಟೆ ಮತ್ತು ಬಾಳೆ ಹಣ್ಣು/ಚಿಕ್ಕಿ ವಿತರಿಸುತ್ತಿದ್ದು, 2023–24 ರ ಉಳಿದ ಶೈಕ್ಷಣಿಕ ಸಾಲಿನ ಅವಧಿಗೆ ವಾರದ ಎಲ್ಲಾ ದಿನಗಳಲ್ಲಿ ಮೊಟ್ಟೆ ಮತ್ತು ಬಾಳೆ ಹಣ್ಣು/ಚಿಕ್ಕಿ ಯನ್ನು ಹೆಚ್ಚುವರಿಯಾಗಿ ಒದಗಿಸುವ ಹಿನ್ನೆಲೆಯಲ್ಲಿ ಯೋಜನೆ ರೂಪಿಸಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ.

(iii) ಜಿಲ್ಲಾ ಮಟ್ಟದಲ್ಲಿ ಅನುಷ್ಠಾನ ಸಮಿತಿಯ ಮಾರ್ಗದರ್ಶನದಲ್ಲಿ ಮಾರ್ಗಸೂಚಿ ತಯಾರಿಸಿ ಅಗತ್ಯವಿರುವ ಇನ್ನಿತರೆ ಸೌಲಭ್ಯಗಳನ್ನು ಒದಗಿಸಲು ಕ್ರಮವಹಿಸುವುದು.

(iv) ಕಲ್ಯಾಣ ಕರ್ನಾಟಕ ಭಾಗದಲ್ಲಿ ಇರುವ ಒಟ್ಟು 228 ಪದವಿ ಪೂರ್ವ ಕಾಲೇಜುಗಳ ಸಮಗ್ರ ಅಭಿವೃದ್ಧಿಯನ್ನು ಅಕ್ಷರ ಆವಿಷ್ಕಾರ ಯೋಜನೆಯಡಿ ಮಾಡಲಾಗುವುದು. 2023–24ನೇ ಶೈಕ್ಷಣಿಕ ಸಾಲಿನಲ್ಲಿ ಜಿಲ್ಲೆಗೆ ಕನಿಷ್ಟ 10 ಪದವಿ ಪೂರ್ವ ಕಾಲೇಜುಗಳನ್ನು, ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಆಯ್ಕೆ ಮಾಡಿ ಸಮಗ್ರ ಅಭಿವೃದ್ಧಿ ಪಡಿಸಲಾಗುವುದು. ಇದರ ಕ್ರಿಯಾ ಯೋಜನೆಯನ್ನು ತಯಾರಿಸುವ ಜವಾಬ್ದಾರಿ ಆಯಾ ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರದ್ದಾಗಿರುತ್ತದೆ. ಹಾಗೂ ಸದರಿ ಯೋಜನೆಯನ್ನು ಮಾನ್ಯ ಜಿಲ್ಲಾ ಉಸ್ತುವಾರಿ ಸಚಿವರು ಅನುಮೋದಿಸಿದ ನಂತರ ಅನುಷ್ಠಾನಗೊಳಿಸುವ ಪ್ರಾಧಿಕಾರ ಆಯಾ ಜಿಲ್ಲೆಯ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಆಗಿರುತ್ತಾರೆ.

(v) ಪದವಿ ಪೂರ್ವ ಕಾಲೇಜುಗಳಿಗೆ ಆಯಾ ಜಿಲ್ಲೆಗೆ ಒದಗಿಸಲಾಗಿರುವ ಮ್ಯಾಕ್ರೋ ಅನುದಾನದಲ್ಲಿ ಕನಿಷ್ಠ ಶೇ.10ರಷ್ಟು ಅನುದಾನವನ್ನು ಮೀಸಲಿರಿಸಲಾಗಿದೆ. ಪದವಿ ಪೂರ್ವ ಕಾಲೇಜುಗಳಿಗೆ ಸಂಬಂದಿಸಿದಂತೆ ಅನುಬಂಧ–11 & 12 ರಲ್ಲಿನ (Templates) ಭರ್ತಿ ಮಾಡಿ ಸಲ್ಲಿಸುವುದು.

ಈ ಕಾರ್ಯಕ್ರಮವು ಕಲ್ಯಾಣ ಕರ್ನಾಟಕ ಪ್ರದೇಶದ ಸಮಗ್ರ ಶೈಕ್ಷಣಿಕ ಅಭಿವೃದ್ಧಿಪಡಿಸುವ ಗುರಿ ಹೊಂದಿರುವ ಹಿನ್ನಲೆಯಲ್ಲಿ ಸರ್ಕಾರದ ಅತ್ಯಂತ ಮಹತ್ವಾಕಾಂಕ್ಷಿ ಯೋಜನೆಯಾಗಿದೆ. ಆದ್ದರಿಂದ ಪ್ರತಿ ಹಂತದಲ್ಲಿಯು ಸಂಬಂಧಿಸಿದ ಪ್ರಾಧಿಕಾರಿಗಳು ಜವಬ್ದಾರಿಯಿಂದ ಕಾರ್ಯಪ್ರವೃತ್ತರಾಗಲು ಈ ಮೂಲಕ ಸೂಚಿಸಿದೆ.

(ಅನಿರುದ್ಧ್ ಶ್ರವಣ್, ಭಾ.ಆ.ಸೇ., )
ಕಾರ್ಯದರ್ಶಿಗಳು
ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ,
ಕಲಬುರಗಿ.

**ಅಡಕಗೊಳಿಸಿದೆ:**

1. ನಮೂನೆ–01: ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ದೃಢೀಕರಣ ಪತ್ರದ ನಮೂನೆ.
2. ANNEXURE-A & B : ಘಟಕ ವೆಚ್ಚದ ಕುರಿತಾದ ವಿವರವಾದ ಮಾಹಿತಿ.
3. Templates i) ಅನುಬಂಧ–(1–10)– ಶಾಲೆಗಳಿಗೆ
   ii) ಅನುಬಂಧ–(11–12)– ಪದವಿ ಪೂರ್ವ ಕಾಲೇಜುಗಳಿಗೆ

**ಪ್ರತಿಗಳನ್ನು:**

1. ವಿಭಾಗದ ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ.
2. ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ, ಕಲಬುರಗಿ

3. ವಿಭಾಗದ ಎಲ್ಲಾ ಶಾಲಾ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರು (ಆಡಳಿತ) ರವರಿಗೆ.
4. ವಿಭಾಗದ ಎಲ್ಲಾ ಅನುಷ್ಠಾನಾಧಿಕಾರಿಗಳಿಗೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಇಲಾಖೆಯ ಕಾರ್ಯನಿರ್ವಾಹಕ ಅಭಿಯಂತರರು, ನಿರ್ಮಿತಿ ಕೇಂದ್ರದ ಕಾರ್ಯನಿರ್ವಾಹಕ ಅಭಿಯಂತರರು ಹಾಗೂ ಕೆ.ಆರ್.ಐ.ಡಿ.ಎಲ್. ಕಾರ್ಯನಿರ್ವಾಹಕ ಅಭಿಯಂತರರು ).
5. ವಿಭಾಗದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ.
6. ವಿಭಾಗದ ಎಲ್ಲಾ ತಾಲ್ಲೂಕು ಪಂಚಾಯತ್ ಕಾರ್ಯನಿರ್ವಹಣಾಧಿಕಾರಿಗಳಿಗೆ.

**ಪ್ರತಿಗಳನ್ನು ಮಾಹಿತಿಗಾಗಿ:**

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಕರ್ನಾಟಕ ಸರ್ಕಾರದ ಸಚಿವಾಲಯ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಲೋಕೋಪಯೋಗಿ ಇಲಾಖೆ, ಕರ್ನಾಟಕ ಸರ್ಕಾರದ ಸಚಿವಾಲಯ, ಬೆಂಗಳೂರು.
3. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಕರ್ನಾಟಕ ಸರ್ಕಾರದ ಸಚಿವಾಲಯ, ಬೆಂಗಳೂರು.
4. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಕರ್ನಾಟಕ ಸರ್ಕಾರದ ಸಚಿವಾಲಯ, ಬೆಂಗಳೂರು.
5. ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು.
6. ವಿಭಾಗದ ಎಲ್ಲಾ ಜಿಲ್ಲೆಯ ಜಿಲ್ಲಾಧಿಕಾರಿಗಳು.
7. ಮಾನ್ಯ ಅಧ್ಯಕ್ಷರ ಆಪ್ತ ಕಾರ್ಯದರ್ಶಿಗಳು, ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ, ಕಲಬುರಗಿ ಇವರಿಗೆ ಕಳುಹಿಸುತ್ತಾ, ವಿಷಯವನ್ನು ಮಾನ್ಯ ಅಧ್ಯಕ್ಷರ ಅವಗಾಹನೆಗೆ ತರಲು ಕೋರಿದೆ.
8. ಕಛೇರಿ ಪ್ರತಿ.